**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 9**
**ಚಾ.ಸಾ.ಸಂಖ್ಯೆ: 28**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿ: ಮುಧೋಳ</u>**

**ಎಸ್.ಸಿ.ಸಂಖ್ಯೆ: 10035/2025**

| | |
|---|---|
| ಹೆಸರು: | ಡಾ:: ಶಿವಾನಂದ ಕಾಡಗೌಡರ |
| ತಂದೆಯ ಹೆಸರು: | ಅರ್ಜುನ |
| ವಯಸ್ಸು: | **43** ವರ್ಷ |
| ಉದ್ಯೋಗ: | ವೈದ್ಯಾಧಿಕಾರಿ ಕುಮಾರೇಶ್ವರ ಆಸ್ಪತ್ರೆ, ಬಾಗಲಕೋಟೆ |
| ವಾಸ: | ಬಾಗಲಕೋಟೆ. |

**ಸಾಕ್ಷಿಯನ್ನು ದಿ: 21.02.2026 ರಂದು ವಿ.ಸಿ. ಮೂಲಕ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:-</u>**

ನಾನು **2013** ರಿಂದ **2025** ರವರೆಗೆ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕೆಲಸ ಮಾಡಿದ್ದೇನೆ.

**1.** ದಿ: **03.06.2023** ರಂದು ಪಿ.ಎಸ್.ಐ. ಮುಧೋಳ ಪಿ.ಎಸ್. ಇವರು ಗಾಯಾಳು ಮಹಾದೇವಿ ಇವರ ಎಕ್ಸರೆ ವರದಿ, ಸ್ಕ್ಯಾನಿಂಗ ಹಾಗೂ ಡಿಸ್ಚಾರ್ಜ ವರದಿಗಳನ್ನು ಪೂರೈಸಲು ಈಗ ನೋಡುತ್ತಿರುವ ಮನವಿಯನ್ನು ನೀಡಿದರು. (ಸದರಿ ಮನವಿಯನ್ನು ನಿಪಿ-**24** ಅಂತ ಗುರುತಿಸಲಾಯಿತು).

**2.** ಅದೇ ದಿವಸ ನಾನು ಈಗ ನೋಡುತ್ತಿರುವ ಎಕ್ಸರೆ ವರದಿ, ಸಿಟಿ ಸ್ಕ್ಯಾನ್ ಬ್ರೇನ್, ಸಿಟಿ ಸ್ಕ್ಯಾನ್ ಪೇಸ್, ಡಿಸ್ಚಾರ್ಜ ಸಮರಿ, ಹಾಗೂ ವೇದಾ ಸ್ಕ್ಯಾನ ಸೆಂಟರನ ಬ್ರೇನ್ ನ ಸಿಟಿ ಸ್ಕ್ಯಾನ ವರದಿ ಇವುಗಳನ್ನು ನೀಡಿರುತ್ತೇನೆ. (ಅವುಗಳನ್ನು ಕ್ರಮವಾಗಿ ನಿಪಿ-**25** ರಿಂದ ನಿಪಿ-**29** ಅಂತ ಗುರುತಿಸಲಾಯಿತು). ನಾನು ಸದರಿ ಗಾಯಾಳುವಿಗೆ ಪ್ರಥಮ ಚಿಕಿತ್ಸೆ ನೀಡಿ ನರತಜ್ಞರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಗಾಯಾಳುವಿನ ರಕ್ತದ ಗುಂಪನ್ನು ಕೇಳಲಾಗಿದ್ದು, ಅದು **B+** ಇದೆ ಅಂತ ಪ್ರತ್ಯೇಕವಾಗಿ ವರದಿ ನೀಡಿದ್ದೇನೆ. (ಸದರಿ ವರದಿಯನ್ನು ನಿಪಿ-**30** ಅಂತ ಗುರುತಿಸಲಾಯಿತು).

**<u>ಪಾಟಿಸವಾಲು: 1 & 2 ನೇ ಆರೋಪಿ ಪರ ಶ್ರೀ.ಎ.ಎಸ್.ಎಸ್. ವಕೀಲರಿಂದ:</u>**

**1.** ಗಾಯಾಳು ನಮ್ಮ ಆಸ್ಪತ್ರೆಗೆ ಸೇರ್ಪಡೆಯಾದಾಗ ಎಷ್ಟು ಸಮಯ ಆಗಿತ್ತು ಅಂತ ನನಗೆ ಗೊತ್ತಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಗಾಯಾಳುವನ್ನು ನಾನೇ

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 9**
**ಚಾ.ಸಾ.ಸಂಖ್ಯೆ: 28**

ಮೊದಲು ಪರಿಕ್ಷೆ ಮಾಡಿದ್ದೇನೆ. ಗಾಯಾಳುವಿನೊಂದಿಗೆ ಆಸ್ಪತ್ರೆಗೆ ಯಾರು ಬಂದಿದ್ದರು ಅಂತ ನನಗೆ ಗೊತ್ತಿಲ್ಲ.ಅವರಿಗೆ ಸೇರ್ಪಡೆಯಾಗಲು ಸರ್ಕಾರಿ ಆಸ್ಪತ್ರೆಯಿಂದ ಶಿಪಾರಸ್ಸು ಪತ್ರ ಇತ್ತು. ಸದರಿ ಕೇಸ ಶೀಟನಲ್ಲಿ ಶಿಪಾರಸ್ಸು ಪತ್ರ ಇದೆ. ಈಗ ನನ್ನ ಹತ್ತಿರ ಇಲ್ಲ. ಸದರಿ ಗಾಯ ಒಂದು ದಿನದ ಅವಧಿಯಲ್ಲಿ ಆಗಿದ್ದು ಇತ್ತು.

**2.** ಸಿಟಿ ಸ್ಕ್ಯಾನ ವರದಿ ನಮ್ಮ ಹತ್ತಿರ ಇದೆ. ನಾನು ಅದನ್ನು ಪೊಲೀಸರಿಗೆ ನೀಡಿದ್ದೇನೆ. ಪೊಲೀಸರ ಮಾತನ್ನು ಕೇಳಿನಿಪಿ-**25** ರಿಂದ **30** ನ್ನು ಸುಳ್ಳು ಸೃಷ್ಟಿಸಿ ನೀಡಿದ್ದೇನೆ ಎಂದರೆ ಸರಿಯಲ್ಲ. ಡಿಸ್ಚಾರ್ಜ ಸಮರಿ ನಿಪಿ-**28** ನ್ನು ನಾನು ತಯಾರಿಸಿಲ್ಲ ಎಂದರೆ ಸರಿ. ನಿಪಿ-**25** ರಿಂದ **27** ನ್ನು ನಮ್ಮ ರೆಡಿಯೊಲಾಜಿ ವಿಭಾಗದಿಂದ ನೀಡಲಾಗಿದೆ. ನಿಪಿ-**30** ನ್ನು ನಮ್ಮ ಪ್ಯಾಥೊಲಾಜಿ ವಿಭಾಗದಿಂದ ನೀಡಲಾಗಿದೆ. ನಾನು ಸ್ವತ: ಪರಿಕ್ಷೆ ಮಾಡಿಲ್ಲ. ನಿಪಿ-**29** ನಮ್ಮ ಆಸ್ಪತ್ರೆಯಿಂದ ನೀಡಲಾಗಿದ್ದು ಅಲ್ಲ ಎಂದರೆ ಸರಿ.

**3.** ನನಗೆ ಈ ಗಾಯಾಳುವಿನ ಗಾಯಗಳ ಸ್ವರೂಪದ ಬಗ್ಗೆ ಸ್ವತ: ಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ನಾನು ಕೇವಲ ದಾಖಲೆಗಳನ್ನು ಪೂರೈಸಿದ್ದೇನೆ ಎಂದರೆ ಸರಿ.

**<u>ಪಾಟಿಸವಾಲು: 3 ರಿಂದ 5ನೇ ಆರೋಪಿ ಪರ ಶ್ರೀ.ಎಸ್.ಜಿ.ಸಿ. ವಕೀಲರಿಂದ:</u>**

**1.** ನಾನು ಈ ಪ್ರಕರಣದಲ್ಲಿ ಗಾಯಾಳುವಿಗೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿನ ಬಿಡುಗಡೆ ಪತ್ರಗಳನ್ನು ಸಹಾಯಕ ವೈದ್ಯರು ಮಾಡುತ್ತಾರೆ. ನಿಪಿ-**28** ರಲ್ಲಿ ರೆಪರ್ಡ ಬೈ ಡಾಕ್ಟರ ಎನ್ನುವ ಕಾಲಂ ಖಾಲಿ ಇದೆ ಎಂದರೆ ಸರಿ. ನಿಪಿ-**28** ರಲ್ಲಿ ಚಿಕಿತ್ಸೆಯ ವಿವರಗಳು ಇಲ್ಲ ಎಂದರೆ ಸರಿಯಲ್ಲ. ಕೇಸಶೀಟನ್ನು ತನಿಖಾಧಿಕಾರಿಗಳು ಕೇಳದೆ ಇದ್ದ ಕಾರಣ ಅದನ್ನು ಹಾಜರುಪಡಿಸಿಲ್ಲ. ಸದರಿ ಬಿಡುಗಡೆ ಪ್ರಮಾಣ ಪತ್ರವನ್ನು ಡಾ// ಬಿ.ಹೆಚ್. ಕೆರೂಡಿ ಅವರು ಮಾಡಿರುತ್ತಾರೆ. ಪಿರ್ಯಾದುದಾರಳಿಗೆ ಯಾವುದೇ ಗಾಯಗಳು ಆಗಿಲ್ಲದೇ ಇದ್ದರೂ ಕೂಡ ಅವಳಿಗೆ ಸಹಾಯ ಮಾಡುವ ಉದ್ದೇಶದಿಂದ ಖೊಟ್ಟಿ ದಾಖಲೆಗಳನ್ನು ಸಂಗ್ರಹಿಸಿ ನೀಡಿದ್ದೇವೆ ಎಂದರೆ ಸರಿಯಲ್ಲ.

**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 9**
**ಚಾ.ಸಾ.ಸಂಖ್ಯೆಃ 28**

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**